# ಮೈಸೂರು ವಿಶ್ವವಿದ್ಯಾನಿಲಯ

Estd-1916
(Re-accredited by NAAC with CGPA 3.47 on four point scale with A grade)

ಸಂಖ್ಯೆ: ಪ.ವಿ.8.1/ಪಿ.ಜಿ.ಸೆಮಿಸ್ಟರ್/ಪ್ರಕಟಣೆ/2009-10

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005
ದಿನಾಂಕ: 24-03-2021

## ಅಧಿಸೂಚನೆ

ವಿಷಯ: ಮೇ-2021ರ ಮಾಹೆಯಲ್ಲಿ ನಡೆಯಲಿರುವ ಒಂದನೇ ಸೆಮಿಸ್ಟರ್‌ನ ಸ್ನಾತಕೋತ್ತರ ಪದವಿ (CBCS/FCBCS ಪದ್ಧತಿಯ) ಎಂ.ಫಿಲ್ ಪದವಿ (Non-CBCS)/ ಡಿಪ್ಲೋಮಾ/ಸರ್ಟಿಫಿಕೇಟ್ ಪ್ರೋಗ್ರಾಂಗಳ (ಕೋರ್ಸ್) ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿ ಮಾಡುವ ಮತ್ತು ಅಭ್ಯರ್ಥನ ಪತ್ರ ಸಲ್ಲಿಸುವ ಬಗೆಗೆ.

ಉಲ್ಲೇಖ: 1) ವಿ.ವಿ. ಅಧಿಸೂಚನೆ ಸಂಖ್ಯೆ: ಎ.ಸಿ.2(ಎಸ್)/34/1990-91, ದಿನಾಂಕ:02-01-2020.
2) ವಿ.ವಿ. ಅಧಿಸೂಚನೆ ಸಂಖ್ಯೆ: ಎ.ಸಿ.7(ಎ)/456/2016-17, ದಿನಾಂಕ:19-12-2020.

*******

ಮೇ-2021ರ ಮಾಹೆಯಲ್ಲಿ ನಡೆಯಲಿರುವ ಒಂದನೇ ಸೆಮಿಸ್ಟರ್ ಸ್ನಾತಕೋತ್ತರ ಪದವಿ (CBCS/FCBCS ಪದ್ಧತಿಯ) ಎಂ.ಫಿಲ್ ಪದವಿ (Non-CBCS)/ಡಿಪ್ಲೋಮಾ/ಸರ್ಟಿಫಿಕೇಟ್ ಪ್ರೋಗ್ರಾಂಗಳ (ಕೋರ್ಸುಗಳ) ಪರೀಕ್ಷೆಯ ಸಂಬಂಧದ, ವೇಳಾಪಟ್ಟಿ ಹಾಗೂ ಪರೀಕ್ಷಾ ಶುಲ್ಕ ಮಾಹಿತಿಗಳು ಕೆಳಕಂಡಂತಿರುತ್ತವೆ.

| | | |
|---|---|---|
| 1 | ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ (ಪ್ರತ್ಯೇಕ ಶೈಕ್ಷಣಿಕ ವೇಳಾಪಟ್ಟಿಗಳಿಗೆ ಇರುವ ಪ್ರೋಗ್ರಾಂ (ಕೋರ್ಸುಗಳ) ಪರೀಕ್ಷೆಗಳು ಆಯಾ ಶೈಕ್ಷಣಿಕ ವೇಳಾಪಟ್ಟಿಯನುಸಾರ ಪ್ರಾರಂಭವಾಗುವುದು) | 05-05-2021 |
| 2 | ಪರೀಕ್ಷಾ ಶುಲ್ಕ ಪಾವತಿಸಲು ಹಾಗೂ ಪರೀಕ್ಷಾ ಅರ್ಜಿ ಪತ್ರವನ್ನು ಸಲ್ಲಿಸಲು ಅಂತಿಮ ದಿನಾಂಕ | 09-04-2021 |
| 3 | ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಗಳನ್ನು ಕಡ್ಡಾಯವಾಗಿ ಭರ್ತಿ ಮಾಡಲು ಅಂತಿಮ ದಿನಾಂಕ | 16-04-2021 |
| 4 | ವೇಳಾಪಟ್ಟಿ ಮತ್ತು ಪ್ರಶ್ನೆಪತ್ರಿಕೆ ಬೇಡಿಕೆಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಅಂತಿಮ ದಿನಾಂಕ | 17-04-2021 |
| 5 | ಪ್ರವೇಶ ಪತ್ರಗಳು, ಅಭ್ಯರ್ಥನ ಪಟ್ಟಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಅಂತಿಮ ದಿನಾಂಕ | 28-04-2021 |

## ಪರೀಕ್ಷಾ ಶುಲ್ಕಗಳ ವಿವರಗಳು

1. **M.Sc./Tech. by Research/ M.Sc. Food Science/ Food Technology/ Food Science by Research/ Speech & Hearing/ M.Tech (CST & CCT)/MCA/MTA/MTTM/LLM/ M.Sc. Computer Science/ M.S. (Int.)/M.Tech in URP/M.Tech in Material Science/M.Sc.Bioscience/Polymer Science/Biochemistry/Biotechnology/Environmental Science/Sugar Technology/ Electronics/ M.Lib.Sci./ MIM/ MDS/ M.Com (FS)/MFAM/ MFABM/ MBA (Agri- Business)/ MSW/ MSc (Criminology & Forensic Science)/Master of Fine Arts/ M.Sc.(IT):**

| | |
|---|---|
| Whole Exam (Per Sem/Exam) | ₹ 2,200=00 |
| Per Paper with Practical | ₹ 880=00 |
| Per paper without Practical | ₹ 570=00 |

2. **M.Com/M.Ed/M.P.Ed./M.Sc/MMusic/M.A/M. Phil and all other Master Degree Courses:**

| | |
|---|---|
| Whole Exam (Per exam) | ₹ 1,430=00 |
| Per Paper with Practical | ₹ 880=00 |
| Per Paper without Practical | ₹ 570=00 |
| I Sem. Dessertation Submission for M.Phil Course | ₹ 3,600=00 |

3. **All P.G. Diploma/Diploma/Certificate Courses:**

| | |
|---|---|
| Whole Exam (Per exam) | ₹ 1,400=00 |
| Per Paper with Practical | ₹ 770=00 |
| Per Paper without Practical | ₹ 460=00 |
| **Marks Card Fee (Per Year/Semester)** | ₹ **320=00** |

ವಿ.ವಿ.ಆದೇಶ ಸಂಖ್ಯೆ:ಎಸಿ.2(ಎಸ್)/122/04-05, ದಿನಾಂಕ: 04-02-2005ರ ಪ್ರಕಾರ ಎಲ್ಲಾ ಪದವಿ ಪ್ರೊಗ್ರಾಂಗಳಿಗೆ (ಕೋರ್ಸ್‌ಗಳಿಗೆ) ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಪತ್ರಿಕೆಗಳ ಪರೀಕ್ಷೆ ತೆಗೆದುಕೊಂಡಲ್ಲಿ ಪಾವತಿಸಬೇಕಾದ ಗರಿಷ್ಠ ಪರೀಕ್ಷಾ ಶುಲ್ಕವು ಆಯಾಯ ವರ್ಷಕ್ಕೆ ವಿಷಯವಾರು ನಿಗದಿಗೊಳಿಸಲಾಗಿರುವ ಪೂರ್ಣ ಪರೀಕ್ಷಾ ಶುಲ್ಕಕ್ಕೆ (whole examination fee) ಸಮಾನವಾಗಿರುತ್ತದೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

**ಸೂಚನೆಗಳು:**

1. **Open Elective** ತೆಗೆದುಕೊಂಡ ವಿದ್ಯಾರ್ಥಿಗಳು **Open Elective** ತೆಗೆದುಕೊಂಡ ವಿಭಾಗ/ಕಾಲೇಜುಗಳಲ್ಲಿಯೇ **Open Elective** ವಿಷಯದ ಪರೀಕ್ಷೆ ಬರೆಯುವುದು, ಇತರೆ ವಿಷಯಗಳ ಪರೀಕ್ಷೆಗಳನ್ನು ಅವರ ಮಾತೃ (Parent) ಅಧ್ಯಯನ ವಿಭಾಗ/ಕಾಲೇಜುಗಳಲ್ಲೇ ಬರೆಯುವುದು.
2. ಪರೀಕ್ಷಾ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಇಲ್ಲಿ ವಿಶ್ವವಿದ್ಯಾನಿಲಯ ಪರೀಕ್ಷಾ ಖಾತೆಗೆ ಜಮಾ ಆಗುವಂತೆ ಪಾವತಿಸಬೇಕು.
3. ಲಿಖಿತ ಪರೀಕ್ಷೆಗಳನ್ನು ಪ್ರಾರಂಭದ ದಿನಾಂಕದಿಂದ 15 ದಿನಗಳೊಳಗೆ ಮುಗಿಯುವಂತೆ ಬೆಳಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 1:00 ಗಂಟೆಯವರೆಗೆ ಇರುವಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಿ 05 ಪ್ರತಿಗಳನ್ನು ಅನುಮೋದನೆಗೆ ಕಳುಹಿಸುವುದು. ವೇಳಾಪಟ್ಟಿಯಲ್ಲಿ ಸರಿಯಾದ **Question Paper Code** ಮತ್ತು **Title** ಅನ್ನು ನಮೂದಿಸುವುದು. **ಆಯ್ಕೆ ಆಧಾರಿತ ಪತ್ರಿಕೆಗಳನ್ನು (Open Elective) ದಿನಾಂಕ: 05-05-2021 ಮತ್ತು 06-05-2021 ರಂದು** ನಿಗದಿಪಡಿಸಬೇಕು.
4. ಪ್ರಾಯೋಗಿಕ, ಮೌಖಿಕ ಪರೀಕ್ಷೆಗಳ ವೇಳಾಪಟ್ಟಿಗಳನ್ನು (ಲಿಖಿತ ಪರೀಕ್ಷೆಗಳ ನಂತರ ಇರುವಂತೆ ಸಿದ್ಧಪಡಿಸಿ) ಪರೀಕ್ಷಾ ಮಂಡಳಿ ಅಧ್ಯಕ್ಷರೊಡನೆ ಸಮಾಲೋಚಿಸಿ ಅನುಮೋದನೆಗೆ ಕಳುಹಿಸುವುದು.

$C_1$ ಮತ್ತು $C_2$ ಅಂಕಗಳನ್ನು (ಲಿಖಿತ ಪರೀಕ್ಷೆಗಳಿಗೆ ಮೊದಲು) ಆನ್‌ಲೈನ್ ಮೂಲಕ ಸಲ್ಲಿಸಬೇಕು ಹಾಗೂ ಲಾಕ್ ಮಾಡಿದ ನಂತರ ಪಟ್ಟಿಯನ್ನು ಮುದ್ರಿಸಿ ಮುಖ್ಯಸ್ಥರ ಸಹಿ ಪಡೆದು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು (ಪುನರ್ ನೋಂದಾಯಿತ ಡ್ರಾಪ್ ಆದ ವಿದ್ಯಾರ್ಥಿಗಳಿಗೂ ಸಿ1, ಸಿ2 ಅಂಕಗಳನ್ನು ನೀಡಬೇಕು) ಆಂತರಿಕ ಪರೀಕ್ಷಾ ಅಂಕಗಳು, ಲಿಖಿತ ಪರೀಕ್ಷೆ ಮುಗಿದ ನಂತರ ಸಲ್ಲಿಸಿದಲ್ಲಿ ಅವುಗಳನ್ನು ಪರಿಗಣಿಸಲಾಗುವುದಿಲ್ಲ. ಈ ತಪ್ಪಿಗೆ ವಿಭಾಗದ ಮುಖ್ಯಸ್ಥರೇ ನೇರ ಹೊಣೆಗಾರರಾಗಿರುತ್ತಾರೆ.

5. ಆನ್‌ಲೈನ್‌ನಲ್ಲಿ $C_1$ ಮತ್ತು $C_2$ ಅಂಕಗಳನ್ನು ನಮೂದಿಸುವ ಮೊದಲು ವಿದ್ಯಾರ್ಥಿಯು ತೆಗೆದುಕೊಳ್ಳುವ ಕೋರ್ಸ್ (ವಿಷಯ/ಪತ್ರಿಕೆಗಳ) ಮಾಹಿತಿಯನ್ನು ಅಪ್‌ಲೋಡ್ ಮಾಡಿದ ನಂತರ ಸಲ್ಲಿಸಲು ಸಾಧ್ಯವಾಗುವುದು. $C_1$ ಮತ್ತು $C_2$ ಅಂಕಗಳನ್ನು ಸಲ್ಲಿಸಲು ನಿಗದಿಪಡಿಸಲಾದ ದಿನಾಂಕ: **30–04–2021,** ಒಂದು ವೇಳೆ ಯಾವುದಾದರೂ ಕಾರಣಕ್ಕೆ ಆನ್‌ಲೈನ್‌ನಲ್ಲಿ ನಮೂದಿಸಲಾಗದಿದ್ದಲ್ಲಿ ಮರುದಿನವೇ ಅಂದರೆ **ದಿನಾಂಕ: 24–02–2021**ರಂದೇ ವಿಶ್ವವಿದ್ಯಾನಿಲಯಕ್ಕೆ Hard Copy ಯ ಪ್ರತಿಯನ್ನು ಸಲ್ಲಿಸಬಹುದಾಗಿರುತ್ತದೆ.

6. ಸುತ್ತೋಲೆ ಸಂಖ್ಯೆ: ವಿಫ/1/9/2013-14, ದಿನಾಂಕ: 25-09-2013 ಪ್ರಕಾರ 2013-14ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ/ಡಿಪ್ಲೋಮ/ಕೋರ್ಸ್‌ಗಳಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ, ಭೋದನಾ ಶುಲ್ಕ, ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ ಮತ್ತು ಅಂತಿಮ ಪದವಿ ಪ್ರಮಾಣ ಪತ್ರದ ಶುಲ್ಕಗಳನ್ನು ಕಟ್ಟಿಸಿಕೊಳ್ಳಬಾರದೆಂದು ಸರ್ಕಾರದ ಆದೇಶವಿರುತ್ತದೆ. ಇದರಂತೆ ಕ್ರಮತೆಗೆದುಕೊಳ್ಳುವುದು.

7. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅವರ ಪೋಷಕರ ಆದಾಯ ರೂ.2.5 ಲಕ್ಷಗಳು ಮೀರಿದಲ್ಲಿ ಅವರುಗಳಿಂದ ಪೂರ್ಣ ಪರೀಕ್ಷಾ ಶುಲ್ಕ ಸಂಗ್ರಹಿಸುವುದು.

8. ಪ್ರವರ್ಗ–೧ ಮತ್ತು ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯಲು ಅರ್ಹರಾದ ಇತರೆ ವರ್ಗಗಳಿಗೆ (ಸಾಮಾನ್ಯ ವರ್ಗದವರನ್ನು ಒಳಗೊಂಡಂತೆ) ಸೇರಿದ ಅಭ್ಯರ್ಥಿಗಳಿಗೆ ಅವರ ಪೋಷಕರ ವಾರ್ಷಿಕ ವರಮಾನದ ಆಧಾರದ ಮೇಲೆ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ಆದರೂ ಅಂತ ಅಭ್ಯರ್ಥಿಗಳು ನಿಗದಿ ಪಡಿಸಿರುವ ಅಂಕಪಟ್ಟಿ ಶುಲ್ಕ **ರೂ.320/-** ಪಾವತಿಸಬೇಕು.

9. ಕುಲಸಚಿವರ ಪತ್ರಸಂಖ್ಯೆ ಎ.ಸಿ.2/182/92–93, ದಿನಾಂಕ: 02–03–2000ರಲ್ಲಿ ತಿಳಿಸಿರುವ ರೀತ್ಯಾ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಕ್ಯಾಟಗರಿ–1ರ ವರ್ಗದ ವಿದ್ಯಾರ್ಥಿಗಳು ಸದರಿ ಕೋರ್ಸನ್ನು ಮುಗಿಸಿದ ನಂತರ ರಿಪೀಟರ್ಸ್ ಆಗಿ ಪರೀಕ್ಷೆಗಳನ್ನು ತೆಗೆದುಕೊಂಡಲ್ಲಿ ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕಗಳನ್ನು ತಪ್ಪದೆ ವಸೂಲು ಮಾಡಬೇಕೆಂದು ತಿಳಿಸಲಾಗಿದೆ.

10. ಒಮ್ಮೆ ಪಾವತಿ ಮಾಡಿದ ಪರೀಕ್ಷಾ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿಯೇ ಆಗಲಿ ಮರುಪಾವತಿ ಮಾಡಲಾಗುವುದಿಲ್ಲ ಅಥವಾ ಮುಂದಿನ ಪರೀಕ್ಷೆಗೆ ಹೊಂದಾಣಿಕೆ ಮಾಡಲಾಗುವುದಿಲ್ಲ.

11. ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳ ಪ್ರವೇಶ ಅನುಮೋದನೆ ಪಡೆದಿರುವ ಬಗೆಗೆ ಮುಖ್ಯಸ್ಥರು ಅಭ್ಯರ್ಥನ ಪಟ್ಟಿಯಲ್ಲಿ ದೃಢೀಕರಿಸಬೇಕು. ಪ್ರವೇಶ ಅನುಮೋದನೆ ಪಡೆಯದೆ ಇರುವಂತಹ ವಿದ್ಯಾರ್ಥಿಗಳನ್ನು ಯಾವುದೇ ಕಾರಣಕ್ಕೂ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಬಾರದು.

12. ಹಾಜರಾತಿ ಕೊರತೆ ಇರುವ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುಮತಿ ನೀಡಲಾಗುವುದಿಲ್ಲ. ಹಾಜರಾತಿ ಇರುವ ಬಗ್ಗೆ ವಿಭಾಗ/ಕಾಲೇಜಿನ ಮುಖ್ಯಸ್ಥರು ಅಭ್ಯರ್ಥನ ಪಟ್ಟಿಯಲ್ಲಿ ದೃಢೀಕರಿಸಬೇಕು.

13. ಪರೀಕ್ಷೆಯ ಒಂದು ಭಾಗವಾಗಿರುವ ಮಹಾನಿಬಂಧ/ಪ್ರೌಢ ಪ್ರಬಂಧ/ಪ್ರಾಜೆಕ್ಟ್ ಕಾರ್ಯ/ಕ್ಷೇತ್ರಕಾರ್ಯ ವರದಿ ಇತ್ಯಾದಿಗಳನ್ನು ನಿರ್ದಿಷ್ಟ ವಿಷಯದಲ್ಲಿನ ಲಿಖಿತ/ಪ್ರಾಯೋಗಿಕ ಪರೀಕ್ಷೆಯ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಅಧ್ಯಯನ ವಿಭಾಗಗಳ ಸಂಬಂಧಪಟ್ಟ ಅಧ್ಯಕ್ಷರು/ಮುಖ್ಯಸ್ಥರಿಗೆ ದ್ವಿಪ್ರತಿಗಳಲ್ಲಿ ಸಲ್ಲಿಸಬೇಕು. ಪ್ರೌಢಪ್ರಬಂಧದಲ್ಲಿ ವಿದ್ಯಾರ್ಥಿಯ ಹೆಸರು ಮತ್ತು ನೋಂದಣಿ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

14. ವಿಶೇಷ ಸಂದರ್ಭಗಳಲ್ಲಿ ಒಪ್ಪುವಂತಹ ಕಾರಣವಿದ್ದರೆ ಮೇಲ್ಕಂಡ ಪ್ರಸಂಗಗಳಲ್ಲಿ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳ ಕೊನೆಯ ದಿನಾಂಕದಿಂದ ಗರಿಷ್ಠ ಒಂದು ತಿಂಗಳ ಕಾಲಾವಧಿ ವಿಸ್ತರಿಸಲು ಅವಕಾಶ ನೀಡಲಾಗುವುದು. ಅಂತಹ ಅಭ್ಯರ್ಥನ ಪತ್ರಗಳನ್ನು ಸಂಬಂಧಪಟ್ಟ ಅಧ್ಯಯನ ವಿಭಾಗದ ಅಧ್ಯಕ್ಷರು/ಮುಖ್ಯಸ್ಥರು ಪರಿಗಣಿಸಬೇಕೇ ಬೇಡವೇ ಎಂಬ ಶಿಫಾರಸ್ಸಿನೊಂದಿಗೆ ಕಳುಹಿಸಿ ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆಯಬೇಕು.

ಆದರೆ, ಗೊತ್ತುಪಡಿಸಿದ ವಿಸ್ತರಿತ ಕಾಲಾವಧಿಯ ನಂತರವೂ ಅಭ್ಯರ್ಥಿಗಳು ತಮ್ಮ ಮಹಾನಿಬಂಧ/ಪ್ರೌಢ ಪ್ರಬಂಧ ಇತ್ಯಾದಿಗಳನ್ನು ಸಲ್ಲಿಸದಿದ್ದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳು ಪರೀಕ್ಷೆಯ ಆ ಭಾಗದಲ್ಲಿ ಗೈರುಹಾಜರೆಂದು ಪರಿಗಣಿಸಿ ಫಲಿತಾಂಶಗಳನ್ನು ಪ್ರಕಟಿಸಲಾಗುವುದು. ಇವುಗಳನ್ನು ಪಾಲಿಸದಿದಲ್ಲಿ ಮುಂದೆ ಉಂಟಾಗುವ ಸಮಸ್ಯೆಗಳಿಗೆ ಸಂಬಂಧಪಟ್ಟ ವಿಭಾಗಗಳ/ಕಾಲೇಜುಗಳ ಮುಖ್ಯಸ್ಥರೆ ಹೊಣೆಯಾಗುತ್ತಾರೆ.

**"$C_1$ ಮತ್ತು $C_2$ ಅಂಕಗಳಲ್ಲಿ ಒಟ್ಟಾರೆಯಾಗಿ 30% ಅಂಕಗಳನ್ನು ಗಳಿಸದೇ ಇದ್ದಲ್ಲಿ ಅಂತಹವರು $C_3$ ಪರೀಕ್ಷೆಯನ್ನು ಬರೆಯಲು ಅರ್ಹರಲ್ಲ".**

**ವಿಶೇಷ ಸೂಚನೆ:**

1 ಪಠ್ಯಕ್ರಮದಲ್ಲಿ ಅಥವಾ ಪರೀಕ್ಷೆಗೆ ಸಂಬಂಧಿಸಿದ ಯಾವುದೇ ರೀತಿಯ ಬದಲಾವಣೆಯಿದ್ದಲ್ಲಿ ಸದರಿ ವಿಭಾಗದ ಅಧ್ಯಕ್ಷರು ಬದಲಾವಣೆಯ ವಿವರಗಳೊಂದಿಗೆ ಕಂಪ್ಯೂಟರ್ ವಿಭಾಗದ ಮುಖ್ಯಸ್ಥರನ್ನು ಭೇಟಿಯಾಗಬೇಕೆಂದು ಕೋರಲಾಗಿದೆ.

2 ಪರೀಕ್ಷೆಗಳಿಗೆ **Bar Coded/OMR** ಉತ್ತರ ಪತ್ರಿಕೆಗಳನ್ನು ಉಪಯೋಗಿಸಬೇಕು. ಇದಕ್ಕೆ ಪೂರಕವಾಗಿ ಪ್ರತಿ ವಿದ್ಯಾರ್ಥಿಗೆ **Student ID** ಯನ್ನು ಹಾಗೂ ಪ್ರತಿ ಪ್ರಶ್ನೆ ಪತ್ರಿಕೆಗೆ **Question Paper Code** ಅನ್ನು ನೀಡಲಾಗಿದೆ. **Student ID** ಮತ್ತು **Question Paper Code**ಗಳ ಮಾಹಿತಿ ಬೇಕಾದಲ್ಲಿ ಪರೀಕ್ಷಾ ವಿಭಾಗದ ಗಣಕ ಕೇಂದ್ರದಿಂದ ಪಡೆಯಬೇಕು.

3 ಒಂದು ಮತ್ತು ಮೂರನೇ ಸೆಮಿಸ್ಟರ್ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ (ಪುನರ್ ನೊಂದಾಯಿತರಾದವರಿಗೂ ಸಹ) ಪರೀಕ್ಷಾ ಅರ್ಜಿಯ ಖಾಲಿ ಫಾರಂಗಳನ್ನು ನೀಡಲಾಗುವುದು, ಈ ಅರ್ಜಿಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿ ಅವರಿಂದ ಮಾಹಿತಿ ಪಡೆದು Online ಮೂಲಕ ಸಲ್ಲಿಸಬೇಕು, Onlineನಲ್ಲಿ ಪ್ರವೇಶಪತ್ರ ಪಡೆದು ಅಭ್ಯರ್ಥನಾಪಟ್ಟಿಯ ಜೊತೆಯಲ್ಲಿ ಪ್ರವೇಶಪತ್ರ ಅನುಮೋದನೆಗೆ ಪರೀಕ್ಷಾವಿಭಾಗಕ್ಕೆ ಸಲ್ಲಿಸಬೇಕು. **Open Elective** ಪತ್ರಿಕೆಯ ವಿವರಗಳನ್ನು ಸಹ ಇದೇ ಅರ್ಜಿಯಲ್ಲಿ (ಪ್ರತ್ಯೇಕ ಅರ್ಜಿಯನ್ನು ನೀಡಬಾರದು) ನಮೂದಿಸಬೇಕು. **Open Elective** ತೆಗೆದುಕೊಂಡಿರುವ ವಿಭಾಗ/ಸಂಸ್ಥೆ/ಕಾಲೇಜುಗಳಿಗೆ ಈ ಮಾಹಿತಿಯನ್ನು ನೀಡುವುದು.

4 ಅಗತ್ಯವಿರುವಷ್ಟು ಪರೀಕ್ಷಾ ಅರ್ಜಿಯ ಖಾಲಿ ಫಾರಂಗಳನ್ನು ಗಣಕ ಕೇಂದ್ರದಿಂದ (ಪರೀಕ್ಷಾ ಭವನ) ಮುಂಚಿತವಾಗಿ ಪಡೆಯಬೇಕು.

5 ಚಾಯ್ಸ್ ಬೇಸ್ಡ್ ಕ್ರೆಡಿಟ್ ಪದ್ಧತಿಗೆ ಸಂಬಂಧಿಸಿದಂತೆ **Continuous Assessment** ಬಗ್ಗೆ ವಿವರಗಳನ್ನು ರೆಗ್ಯುಲೇಷನ್ ನಂ.6.2.2.1 ರಲ್ಲಿ ಈ ಕೆಳಕಂಡಂತೆ ವಿವರಿಸಲಾಗಿದೆ:

**"The outline for continuous assessment activities for Component-I ($C_1$) and Component-II ($C_2$) will be proposed by the teacher(s) concerned before the commencement of the semester and will be discussed and decided in the respective Departmental Council. The students should be informed about the modalities well in advance. The evaluated courses/assignments during component-I ($C_1$) and Component-II ($C_2$) of assessment are immediately returned to the candidates after obtaining acknowledgement in the register maintained by the concerned teacher for this purpose. "**

ಈ ಬಗ್ಗೆ ಡಿಪಾರ್ಟ್‌ಮೆಂಟ್ ಕೌನ್ಸಿಲ್ ತೆಗೆದುಕೊಂಡ ನಿರ್ಣಯದ ಪ್ರತಿಯನ್ನು ಈ ಕೂಡಲೇ ಮುಂದಿನ ಕ್ರಮಕ್ಕಾಗಿ ಪರೀಕ್ಷಾ ವಿಭಾಗಕ್ಕೆ ಕಳುಹಿತಕ್ಕದ್ದು.

**Continuous Assessment** ಅಂಕಗಳನ್ನು **Online** ಮುಖಾಂತರ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕ

| | |
|---|---|
| **" $C_1$ " Component**<br>**" $C_2$ " Component** | **30-04-2021** |

F:/ManjuFolder/ P.G.Notification

**ಸಿ1, ಸಿ2 ಅಂಕಗಳನ್ನು ದಿನಾಂಕ: 30-04-2021ರೊಳಗೆ ಕಳುಹಿಸಿಕೊಡಬೇಕು. ನಂತರ ಬಂದ ಸಿ1, ಸಿ2 ಅಂಕಗಳನ್ನು ಪರಿಗಣಿಸಲಾಗುವುದಿಲ್ಲ.**

**<u>ವಿಶೇಷ ಸೂಚನೆ:</u>**

1. $C_1$ ಮತ್ತು $C_2$ ಅಂಕಗಳನ್ನು **Online** ಮುಖಾಂತರ ಸಲ್ಲಿಸಿದ ನಂತರ **Lock** ಮಾಡಿ **Hard Copy** ಯನ್ನು ಪರೀಕ್ಷಾ ವಿಭಾಗಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕು. Open Elective ಪತ್ರಿಕೆಗಳ $C_1$ ಮತ್ತು $C_2$ ಅಂಕಗಳನ್ನು ಸಹ **Online** ಮುಖಾಂತರ ಸಲ್ಲಿಸಬೇಕು. ಆದ್ದರಿಂದ OE ಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ **Online**ನಲ್ಲಿ ಸೇರಿಸುವಾಗ ಆ ಪತ್ರಿಕೆಗಳನ್ನು ಯಾವ ವಿಭಾಗದಲ್ಲಿ ಅಥವಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿರುತ್ತಾರೆ ಎಂಬುದನ್ನು ಸಹ ಗುರುತಿಸಬೇಕು. ನಿಗದಿತ ದಿನಾಂಕದೊಳಗೆ $C_1$ ಮತ್ತು $C_2$ ಅಂಕಗಳನ್ನು ಸಲ್ಲಿಸದೇ ಇದ್ದಲ್ಲಿ ಪ್ರವೇಶ ಪತ್ರಗಳನ್ನು ನೀಡಲಾಗುವುದಿಲ್ಲ.

   ಸಂಬಂಧಪಟ್ಟ ಕಾಲೇಜು/ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರುಗಳು ಪ್ರತಿದಿನ ಪರೀಕ್ಷೆ ಮುಗಿದ ದಿನವೇ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಸೀಲ್ ಮಾಡಿ ಅಂಚೆ ಮೂಲಕ ಅಥವಾ ಖುದ್ದಾಗಿ ಕುಲಸಚಿವ (ಪರೀಕ್ಷಾಂಗ) ರವರ ವಿಭಾಗಕ್ಕೆ ಕಳುಹಿಸಲು ಕ್ರಮಕೈಗೊಳ್ಳುವುದು.

2. **ಉಲ್ಲೇಖ (1)ರ ವಿಶ್ವವಿದ್ಯಾನಿಲಯದ ಅಧಿಸೂಚನೆಯಂತೆ 2015ನೇ ಸಾಲಿನಲ್ಲಿ ದಾಖಲಾಗಿದ್ದ ವಿದ್ಯಾರ್ಥಿಗಳು ತಮ್ಮ ಪದವಿಯ ಎರಡುಪಟ್ಟು ಅವಧಿ ಮುಗಿದ ನಂತರ ಪರೀಕ್ಷೆ ತೆಗೆದುಕೊಳ್ಳುವ odd Semester ವಿದ್ಯಾರ್ಥಿಗಳಿಗೆ ಈ ಪರೀಕ್ಷೆಯು ಮೊದಲ ಪ್ರಯತ್ನವಾಗಿರುತ್ತದೆ. ಈ ಸೌಲಭ್ಯ ಪಡೆಯುವಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವು ಎರಡುಪಟ್ಟು ಜಾಸ್ತಿಯಿರುತ್ತದೆ. ಆದರೆ ಗರಿಷ್ಠಮಿತಿ ಇರುವುದಿಲ್ಲ ಹಾಗೂ**

   **2015 ಹಿಂದಿನ ಹಳೆ (ಸೆಮಿಸ್ಟರ್ ಸ್ಕೀಂಗೆ ಮಾತ್ರ) ವಿದ್ಯಾರ್ಥಿಗಳಿಗೆ ಪುನ: ಪರೀಕ್ಷೆ ಬರೆಯಲು ಅಂತಿಮ ಅವಕಾಶ ನೀಡಲಾಗಿದೆ. ಈ ಹೆಚ್ಚುವರಿ ಅವಕಾಶ ಸೌಲಭ್ಯ ಪಡೆಯುವಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವು ನಾಲ್ಕುಪಟ್ಟು ಹೆಚ್ಚಾಗಿರುತ್ತದೆ. ಪರೀಕ್ಷಾ ಶುಲ್ಕವು ಪಾವತಿ ಮಾಡಲು ಕಡೆಯ ದಿನಾಂಕ ಈ ಅಧಿಸೂಚನೆಯಲ್ಲಿ ತಿಳಿಸಿರುವ ದಿನಾಂಕವೇ ಆಗಿರುತ್ತದೆ**

## <u>ಪರೀಕ್ಷಾ ಕೇಂದ್ರಗಳು ಮತ್ತು ಪರೀಕ್ಷಾ ಮುಖ್ಯ ಮೇಲ್ವಿಚಾರಕರ ನೇಮಕ</u>

ಈ ಮುಂದೆ ನಮೂದಿಸಿರುವಂತೆ ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸಲಾಗಿದೆ ಹಾಗೂ ಸಂಬಂಧಪಟ್ಟ ಕೇಂದ್ರದ ಮುಖ್ಯಸ್ಥರನ್ನು ಪರೀಕ್ಷಾ ಮುಖ್ಯ ಮೇಲ್ವಿಚಾರಕರಾಗಿ ನೇಮಿಸಲಾಗಿದೆ. ಪರೀಕ್ಷೆಗಳು ಸುಗಮವಾಗಿ ನಡೆಯಲು ಮುಖ್ಯ ಮೇಲ್ವಿಚಾರಕರು "Manual for conduct of examination" ಪ್ರಕಾರ ಕ್ರಮ ತೆಗೆದುಕೊಳ್ಳುವುದು.

1. ಸ್ನಾತಕೋತ್ತರ ಪದವಿಯ ಎಲ್ಲಾ ಅಧ್ಯಯನ ವಿಭಾಗಗಳು, ಮಾನಸಗಂಗೋತ್ರಿ, ಮೈಸೂರು.
2. ಮಂಡ್ಯ ಮತ್ತು ಹಾಸನದಲ್ಲಿರುವ ಸ್ನಾತಕೋತ್ತರ ಕೇಂದ್ರಗಳು.
3. ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ.
4. ಪೂಜಾ ಭಗವತ್ ಮೆಮೊರಿಯಲ್ ಮಹಾಜನ ಶಿಕ್ಷಣ ಕೇಂದ್ರ, ಮೇಟಗಳ್ಳಿ, ಕೆ.ಆರ್.ಎಸ್. ರಸ್ತೆ, ಮೈಸೂರು.
5. ಮಹಾರಾಜ ಕಾಲೇಜು, ಮೈಸೂರು.
6. ಲಲಿತಕಲಾ ಕಾಲೇಜು, ಮಾನಸಗಂಗೋತ್ರಿ, ಮೈಸೂರು.
7. ವಿವೇಕಾನಂದ ಇನ್‌ಸ್ಟಿಟ್ಯೂಟ್ ಫಾರ್ ಲೀಡರ್‌ಶಿಫ್ ಡೆವಲಪ್‌ಮೆಂಟ್, ಹೆಬ್ಬಾಳು, ಮೈಸೂರು.
8. ಪ್ರಾಂಶುಪಾಲರು, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.
9. ಪ್ರಾಂಶುಪಾಲರು, ಮಹಾರಾಣಿ ಮಹಿಳಾ ವಾಣಿಜ್ಯ ವ್ಯವಹಾರ ಕಾಲೇಜು, ಮೈಸೂರು.
10. ಪ್ರಾಂಶುಪಾಲರು, ಮಹಾರಾಣಿ ವಿಜ್ಞಾನ ಕಾಲೇಜು, ಮೈಸೂರು.
11. ಪ್ರಾಂಶುಪಾಲರು, ಸೆಂಟ್ ಫಿಲೋಮಿನಾ ಕಾಲೇಜು, ಬನ್ನಿಮಂಟಪ, ಮೈಸೂರು.
12. ಪ್ರಾಂಶುಪಾಲರು, ಟೆರಿಷಿಯನ್ ಕಾಲೇಜು, ಮೈಸೂರು.

13. ಪ್ರಾಂಶುಪಾಲರು, ವಿದ್ಯಾವಿಕಾಸ್ ಎಜುಕೇಷನ್ ಟ್ರಸ್ಟ್, ಮೈಸೂರು.
14. ಅಧ್ಯಕ್ಷರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈ.ವಿ.ವಿ.ಮೈಸೂರು
15. ಪ್ರಾಂಶುಪಾಲರು, ಬಾಸುದೇವ ಸೋಮಾನಿ ಕಾಲೇಜು, ಕುವೆಂಪುನಗರ, ಮೈಸೂರು.
16. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು.
17. ಪ್ರಾಂಶುಪಾಲರು, ಡಿ.ಬನುಮಯ್ಯ ಕಾಲೇಜು, ಮೈಸೂರು.
18. ಪ್ರಾಂಶುಪಾಲರು, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.
19. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಹೂಟಗಳ್ಳಿ, ಬೆಳವಾಡಿ ಪೋಸ್ಟ್, ಮೈಸೂರು.
20. ಪ್ರಾಂಶುಪಾಲರು, ಶಾರದಾ ವಿಲಾಸ ಕಾಲೇಜು, ಮೈಸೂರು.
21. ಪ್ರಾಂಶುಪಾಲರು, ಶ್ರೀ ನಟರಾಜ ಪ್ರಥಮ ದರ್ಜೆ ಕಾಲೇಜು. ಮೈಸೂರು.
22. ಪ್ರಾಂಶುಪಾಲರು, ಎಂಎಂಕೆ ಅಂಡ್ ಎಸ್‌ಡಿಎಂ ಮಹಿಳಾ ಕಾಲೇಜು, ಮೈಸೂರು.
23. ಪ್ರಾಂಶುಪಾಲರು, ಎಂ.ಐ.ಟಿ ಪ್ರಥಮ ದರ್ಜೆ ಕಾಲೇಜು, ಮೈಸೂರು.
24. ಪ್ರಾಂಶುಪಾಲರು, ಟಿ.ಟಿ.ಎಲ್ ಕಾಲೇಜು, ಸರಸ್ವತಿಪುರಂ, ಮೈಸೂರು.
25. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ.
26. ಪ್ರಾಂಶುಪಾಲರು, ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸುತ್ತೂರು, ನಂಜನಗೂಡು ತಾಲ್ಲೂಕು, ಮೈಸೂರು.
27. ಪ್ರಾಂಶುಪಾಲರು, ಶ್ರೀ ಡಿ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.
28. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ನಗರ.
29. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕೆ.ಆರ್.ನಗರ.
30. ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ.
31. ಪ್ರಾಂಶುಪಾಲರು, ಭಾರತೀ ಕಾಲೇಜು ಸ್ನಾತಕೋತ್ತರ ಕೇಂದ್ರ, ಭಾರತೀ ನಗರ, ಕೆ.ಎಂ.ದೊಡ್ಡಿ.
32. ಪ್ರಾಂಶುಪಾಲರು, ಪಿ.ಇ.ಎಸ್. ಕಾಲೇಜು, ಮಂಡ್ಯ.
33. ಪ್ರಾಂಶುಪಾಲರು ಸರ್ಕಾರಿ ಮಹಿಳಾ ಕಾಲೇಜು, ಮದ್ದೂರು.
34. ಪ್ರಾಂಶುಪಾಲರು ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ, ಮಂಡ್ಯ.
35. ಪ್ರಾಂಶುಪಾಲರು, ಶಾಂತಿ ಕಾಲೇಜು, ಮಳವಳ್ಳಿ.
36. ಪ್ರಾಂಶುಪಾಲರು, ಶ್ರೀ ಶಂಭುಲಿಂಗೇಶ್ವರ ಶಿಕ್ಷಣ ಮಹಾವಿದ್ಯಾಲಯ, ಪಾಂಡವಪುರ.
37. ಪ್ರಾಂಶುಪಾಲರು, ಸರ್ಕಾರಿ ಕಲಾ ಕಾಲೇಜು, ಹಾಸನ.
38. ಪ್ರಾಂಶುಪಾಲರು, ಹೆಚ್.ಆರ್.ಇನ್‌ಸ್ಟಿಟ್ಯೂಟ್ ಸಂಸ್ಥೆ, ಹಾಸನ.
39. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಹಾಸನ.
40. ಪ್ರಾಂಶುಪಾಲರು, ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ.
41. ಪ್ರಾಂಶುಪಾಲರು, ಎನ್.ಡಿ.ಆರ್.ಕೆ ಪ್ರಥಮ ದರ್ಜೆ ಕಾಲೇಜು, ಹಾಸನ.
42. ಪ್ರಾಂಶುಪಾಲರು, ಬಿ.ಇ.ಜಿ. ಪ್ರಥಮ ದರ್ಜೆ ಕಾಲೇಜು, ಹಾಸನ.
43. ಪ್ರಾಂಶುಪಾಲರು, ಶ್ರೀ.ಹೆಚ್.ಡಿ.ದೇವೇಗೌಡ ಪ್ರ.ದ.ಕಾಲೇಜು, ಪಡುವಲಹಿಪ್ಪೆ, ಹೊಳೆನರಸೀಪುರ ತಾಲ್ಲೂಕು.
44. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ.
45. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಹೊಳೆನರಸೀಪರ.
46. ಪ್ರಾಂಶುಪಾಲರು, ವೈ.ಡಿ.ಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೇಲೂರು.

**ಈ ಕೆಳಕಂಡ ಕಾಲೇಜುಗಳ ವಿದ್ಯಾರ್ಥಿಗಳು ಮುಂದೆ ನಮೂದಿಸಿರುವ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಸೂಚಿಸಲಾಗಿದೆ.**

| ಕ್ರ. ಸಂ. | ಕಾಲೇಜಿನ ಹೆಸರು | ಕೋರ್ಸ್ | ಪರೀಕ್ಷಾ ಕೇಂದ್ರ |
|---|---|---|---|
| 1 | ಶ್ರೀ.ಆದಿಚುಂಚನಗಿರಿ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ನಾಗಮಂಗಲ | ಎಂ.ಕಾಂ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪೇಟೆ |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಉದಯಪುರ | ಎಂ.ಕಾಂ | ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಳೆಬೀಡು, ಹಾಸನ ಜಿಲ್ಲೆ | ಎಂ.ಕಾಂ | ವೈ.ಡಿ.ಡಿ. ಪ್ರಥಮ ದರ್ಜೆ ಕಾಲೇಜು, ಬೇಲೂರು. |

| | | | |
|---|---|---|---|
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೊಸಳೆ ಹೊಸಳ್ಳಿ, ಹಾಸನ ಜಿಲ್ಲೆ | ಎಂ.ಕಾಂ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ |
| 5 | ಜೆ.ಎಸ್.ಎಸ್. ಮಹಿಳಾ ಕಾಲೇಜು ಚಾಮರಾಜನಗರ | ಎಂ.ಎ ಕನ್ನಡ | ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ |
| 6 | ಜೆ.ಎಸ್.ಎಸ್. ಮಹಿಳಾ ಕಾಲೇಜು ಕೊಳ್ಳೆಗಾಲ | ಎಂ.ಕಾಂ | |
| 7 | ಶ್ರೀ.ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ | ಎಂ.ಎ ಕನ್ನಡ | |
| 8 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚಾಮರಾಜನಗರ. | | |

**ಸೂಚನೆ:** ಮೇಲ್ಕಂಡ ಕಾಲೇಜುಗಳ ಮುಖ್ಯಸ್ಥರು ಸಂಬಂಧಪಟ್ಟ ಪರೀಕ್ಷಾ ಮುಖ್ಯ ಮೇಲ್ವಿಚಾರಕರುಗಳಿಗೆ ಪರೀಕ್ಷಾ ಸಂಬಂಧ ಎಲ್ಲಾ ದಾಖಲೆಗಳನ್ನು ಸಾಕಷ್ಟು ಮುಂಚಿತವಾಗಿ ಕಳುಹಿಸಿಕೊಡುವುದು ಹಾಗೂ ಮೇಲ್ಕಂಡ ಪರೀಕ್ಷಾ ಕೇಂದ್ರದ ಮುಖ್ಯ ಮೇಲ್ವಿಚಾರಕರು ತಮ್ಮ ಕೇಂದ್ರಕ್ಕೆ ವರ್ಗಾಯಿಸಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸುವುದು.

ಕರಡು ಕುಲಸಚಿವ (ಪರೀಕ್ಷಾಂಗ) ಅವರಿಂದ ಅನುಮೋದಿಸಲ್ಪಟ್ಟಿದೆ.

K.N. M 24/3/24

ಉಪ ಕುಲಸಚಿವ (ಪರೀಕ್ಷಾಂಗ)

**ಇವರಿಗೆ:**

1. ಎಲ್ಲಾ ಸ್ನಾತಕೋತ್ತರ ವಿಭಾಗಗಳ/ಸಂಸ್ಥೆಗಳ ಅಧ್ಯಕ್ಷರು/ನಿರ್ದೇಶಕರು, ಮಾಗಂ, ಮೈಸೂರು. } ಅವಗಾಹನೆ
2. ನಿರ್ದೇಶಕರು/ಮುಖ್ಯಸ್ಥರು, ಸ್ನಾತಕೋತ್ತರ ಕೇಂದ್ರ, ಮಂಡ್ಯ ಮತ್ತು ಹಾಸನ. } ಮತ್ತು ಸೂಕ್ತ ಕ್ರಮಕ್ಕಾಗಿ
3. ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ.
4. ಸಂಬಂಧಪಟ್ಟ ಎಲ್ಲಾ ಕಾಲೇಜುಗಳ/ಸಂಸ್ಥೆಗಳ ಪ್ರಾಂಶುಪಾಲರು/ಮುಖ್ಯಸ್ಥರು.
5. ಕುಲಸಚಿವ (ಪರೀಕ್ಷಾಂಗ), ಬೆಂಗಳೂರು/ಕರ್ನಾಟಕ/ದಾರವಾಡ/ಕುವೆಂಪು/ಶಿವಮೊಗ್ಗ/ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು/ಮಂಗಳೂರು/ಗುಲ್ಬರ್ಗ/ತುಮಕೂರು ವಿಶ್ವವಿದ್ಯಾನಿಲಯ.
6. ಅಧ್ಯಕ್ಷರು, ಗಣಕ ವಿಜ್ಞಾನ, ಮಾನಸಗಂಗೋತ್ರಿ, ಮೈಸೂರು – ಈ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯ, ವೆಬ್‌ಸೈಟ್‌ನಲ್ಲಿ Upload ಮಾಡಲು ಕೋರಿದೆ.
7. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
8. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
9. ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು.
10. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ವಿಶೇಷಾಧಿಕಾರಿಗಳು, ಪರೀಕ್ಷಾ ಸುಧಾರಣ ಘಟಕ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ವ್ಯವಸ್ಥಾಪಕರು, ಮೆಟಾ–ಐ ಟೆಕ್ನಾಲಾಜೀಸ್ ಪ್ರೈವೇಟ್ ಲಿಮಿಟೆಡ್, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
13. ಎಲ್ಲಾ ಉಪ/ಸಹಾಯಕ ಕುಲಸಚಿವರು (ಪರೀಕ್ಷಾಂಗ), ಅಧೀಕ್ಷಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
14. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
15. ಕಾರ್ಯನಿರ್ವಾಹಕರು, ಪ.ವಿ.8.2/8.3/8.5/8.7/8.9/1.7/ORP, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು– ಸೂಕ್ತ ಕ್ರಮಕ್ಕಾಗಿ.
16. ಕಛೇರಿ ಪ್ರತಿ.